International Journal of Research in Social Sciences
Volume 9, Issue 5 (May 2019)
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

# ರನ್ನನ ಗಧಾಯುದ್ಧ: ನಾಯಕ-ಪ್ರತಿನಾಯಕ ಪಾತ್ರ : ಒಂದು ವಿಶ್ಲೇಷಣೆ

**Dr.RAVI,**
**ASSISTANT PROFESSOR,**
**DEPARTMENT OF KANNADA,**
**GOVERNMENT FIRST GRADE COLEGE,**
**CHANNAGIRI TQ, DAVANAGERE DIST,**
**KARNATAKA STATE.**

## Abstract

ಕನ್ನಡದ ಅಭಿಜಾತ ಸಾಹಿತ್ಯ ಪರಂಪರೆಯಲ್ಲಿ ನಾಯಕ ಹಾಗು ಪ್ರತಿನಾಯಕ ಇವರನ್ನು ವಿಶ್ವಾತ್ಮಕ ಸಂಸ್ಕೃತ ಸಾಹಿತ್ಯ ಪರಂಪರೆಯು, ದೇಸೀಯ ಸಾಹಿತ್ಯ ಸಂಸ್ಕೃತಿಗೆ ಮಾದರಿಯಾಗಿದ್ದ ಸಂದರ್ಭದಲ್ಲಿ, ಕನ್ನಡ ಒಂದು ದೇಶಭಾಷೆಯಾಗಿ, ತನ್ನ ಅನನ್ಯತೆ, ಹಾಗು ತತ್ಸಂದರ್ಭದ ಅಭಿಜಾತ ಮಾದರಿಯನ್ನು ಕನ್ನಡದಲ್ಲಿ ಕಟ್ಟಿಕೊಳ್ಳುವ ಜರೂರಿನಲ್ಲಿ ಹೇಗೆ ನಾಯಕ ಹಾಗು ಪ್ರತಿನಾಯಕ ಪರಿಕಲ್ಪನೆಗಳನ್ನು ವಿಶ್ವಾತ್ಮಕತೆಗೆ ಪ್ರತಿಯಾಗಿ ಸ್ಥಳೀಯ ಮೌಲ್ಯಗಳ ಹಿನ್ನೆಲೆಯಲ್ಲಿ ರೂಪಿಸಿಕೊಂಡಿತು ಎಂಬುದನ್ನು ಇಲ್ಲಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಈ ವಿಶ್ವಾತ್ಮಕ ಪರಿಕಲ್ಪನೆಗಳನ್ನು ಸ್ಥಳೀಯ ದೇಶಭಾಷೆಯಲ್ಲಿ ರೂಪಿಸಿಕೊಳ್ಳುವ ಸಂದರ್ಭದಲ್ಲಿ ಸಾಹಿತಿ ಹಾಗು ಆಶ್ರಯದಾತ ಪ್ರಭುತ್ವ ಇವುಗಳ ನಡುವಿನ ಅನುಸಂಧಾನದ ರೀತಿಯನ್ನು ಪರಿಶೀಲಿಸುವುದು, ಆ ಮುಖೇನ ಇಂದಿನ ಪ್ರಜಾಸತ್ತಾತ್ಮಕ ಪ್ರಭುತ್ವ ಹಾಗು ಬರೆಹಗಾರ ಇವುಗಳ ನಡುವೆ ಇರಬೇಕಾದ ಸಂಬಂಧ ಎಂಥದ್ದು ಮೇಲಿನ ನಿದರ್ಶನದ ಮೂಲಕ ಅರಿಯಲೆತ್ನಿಸುವುದು ಲೇಖನದ ಪ್ರಯತ್ನ.

********

ಪ್ರಾಚೀನ ಕನ್ನಡ ಸಾಹಿತ್ಯದ ಅಭಿಜಾತ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುವ ದೊಡ್ಡ ಹೆಸರು ರನ್ನನದು. ಉಪಲಬ್ಧ ಪಠ್ಯಗಳ ಅನುಸಾರ ಆದಿಕವಿ ಪಂಪನ ನಂತರ ಕಂಡುಬರುವ ಶ್ರೇಷ್ಠ ಕವಿ. ರತ್ನತ್ರಯರಲ್ಲಿ ಒಬ್ಬ. ಕವಿಚಕ್ರವರ್ತಿ. ಕಾಲ ಹತ್ತನೆಯ ಶತಮಾನ. ಹಲವು ಕೃತಿಗಳು ಈತನ ಹೆಸರಿನಲ್ಲಿವೆಯಾದರೂ ಕೆಲವು ಉಪಲಬ್ಧವಿವೆ. ಕೆಲವಿಲ್ಲ. ಈತನ ಬಹುಚರ್ಚಿತವಾದ ಕೃತಿಗಳು ಎರಡು. ಒಂದು ಅಜಿತ ತೀರ್ಥಂಕರ ಪುರಾಣ.

ಮತ್ತೊಂದು ಸಾಹಸಭೀಮ ವಿಜಯಂ. ಪ್ರಸ್ತುತ ಸಾಹಸಭೀಮ ಕೃತಿಯಲ್ಲಿನ ನಾಯಕ-ಪ್ರತಿನಾಯಕ ಪರಿಕಲ್ಪನೆಯ ವಿವೇಚನೆ ಇಲ್ಲಿನ ಅಧ್ಯಯನದ ಉದ್ದೇಶ.

**Objectives:** 1.ರನ್ನನ ಸಾಹಸ ಭೀಮ ಕೃತಿಯಲ್ಲಿನ ನಾಯಕ-ಪ್ರತಿನಾಯಕ ಪರಿಕಲ್ಪನೆಯ ಪರಿಶೀಲನೆ.

2.ಕವಿ ಹಾಗು ಸಹೃದಯರಿಗೆ ನಾಯಕನಿಗೆ ಮಿಗಿಲಾಗಿ ಪ್ರತಿನಾಯಕ ಮುಖ್ಯನೆನಿಸುವುದರ ಬಗೆಗೆ ವಿಶ್ಲೇಷಣೆ.

**Key Words:** ನಾಯಕ, ಪ್ರತಿನಾಯಕ, ವಿಶ್ವಾತ್ಮಕ ಸಂಸ್ಕೃತ, ಸ್ಥಳೀಯ ಕನ್ನಡ, ಸಂಘರ್ಷ, ಮಹಾಕಾವ್ಯ ಲಕ್ಷಣಗಳು, ವಸ್ತುನಿಷ್ಠ ಮೌಲ್ಯಗಳು, ಸ್ಥಳೀಯ ಮೌಲ್ಯಗಳು, ರನ್ನ, ಸಾಹಸಭೀಮ ವಿಜಯಂ, ಭೀಮ, ದುರ್ಯೋಧನ, ಪಂಪ, ವಿಕ್ರಮಾರ್ಜುನ ವಿಜಯಂ, ಅರ್ಜುನ, ಕರ್ಣ. ಪ್ರಭುತ್ವ.

**Notes:** ವಸ್ತುನಿಷ್ಠ ಮೌಲ್ಯಗಳು: ಸಂಸ್ಕೃತ ಸಾಹಿತ್ಯ ಸಂಸ್ಕೃತಿಯಲ್ಲಿ ನಿರೂಪಿತ ಮೌಲ್ಯಗಳು.

ಸ್ಥಳೀಯ ಮೌಲ್ಯಗಳು: ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ನಿರೂಪಿತ ಮೌಲ್ಯಗಳು.

ಸಾಹಸ ಭೀಮ ವಿಜಯ ಕಂಠೋಕ್ತವಾಗಿಯೆ ಹೇಳುವಂತೆ ಅಲ್ಲಿ ಭೀಮನೆ ಕಾವ್ಯ ನಾಯಕ ಮತ್ತು ಪಠ್ಯದ ಕೇಂದ್ರ. ಪಠ್ಯ ಭೀಮನ ಪ್ರತಾಪ ವರ್ಣನೆಯಿಂದ ಮೊದಲಾಗಿ ನಂತರ ಸಂಘರ್ಷ, ವೈರಿನಾಶ ಮತ್ತು ಭೀಮ ವಿಜಯದಿಂದ ಅಂತ್ಯವಾಗುವ ಚೌಕಟ್ಟಿನಿಂದ ಕೂಡಿದೆ. ಈ ಹಿನ್ನೆಲೆಯಲ್ಲಿ ಇದು ಸಂಸ್ಕೃತ ಲಾಕ್ಷಣಿಕರು ವಿಧಿಸುವ, ಪಠ್ಯದಲ್ಲಿ ನಾಯಕ, ಪ್ರತಿನಾಯಕ ಪಾತ್ರ ವಿನ್ಯಾಸಗಳು ಮತ್ತು ಸಂಘರ್ಷ ಹೇಗೆ ರೂಪಿತವಾಗಬೇಕು ಎನ್ನುವ ಒಂದು ಸ್ಥೂಲ ನಕಾಶೆಯಂತೆಯೆ ಹೊರಡುತ್ತದೆ. ಅಂದರೆ ವಿಶ್ವಾತ್ಮಕ ಸಂಸ್ಕೃತವು ವಿಧಿಸುವ ಬಹುತೇಕ ನಾಟಕ ಸಂಬಂಧಿಯಾದ ಮಾರ್ಗೀಯ ವಿನ್ಯಾಸವೇನಿದೆ ಅದನ್ನು ಸಾಹಸ ಭೀಮ ವಿಜಯ ಪಠ್ಯವು ಸ್ಥೂಲವಾಗಿ ಒಳಗೊಳ್ಳುತ್ತದೆ. ಅದರಂತೆ ನಾಯಕ ಪಾತ್ರರಚನೆಯ ಹೊರ ಲಕ್ಷಣ ಕೂಡ ಅದೇ ಮಾದರಿಯದ್ದಾಗಿದೆ.

ನಾಯಕ ಪಾತ್ರಕ್ಕೆ ಸಂಬಂಧಿಸಿದಂತೆ ಮತ್ತೊಂದು ಆಯಾಮವು ಕೂಡ ಇದೆ. ಸ್ಥಳೀಯ ಅರಸು ಸತ್ಯಾಶ್ರಯ ಇಱಿವ ಬೆಡಂಗನನ್ನು ನಾಯಕನೊಟ್ಟಿಗೆ ಸಮೀಕರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಠ್ಯಕ್ಕೊಂದು ರಾಜಕೀಯವಾದ ನಿಶ್ಚಿತಾರ್ಥವೂ ಕೂಡ ಇದೆ. ಆದ್ದರಿಂದ ನಾಯಕನ ಗೆಲುವು ಸತ್ಯಾಶ್ರಯನ ಗೆಲುವೂ ಆಗುತ್ತದೆ

ಮತ್ತು ಈ ರಾಜಕೀಯ ತಗುಳ್ವಿಕೆಯಿಂದ ಕವಿ ತನ್ನಿಚ್ಛೆಗೆನಿಸಿದಂತೆ ನಾಯಕ ಪಾತ್ರವನ್ನು ಬಾಗಿಸುವಂತಿಲ್ಲ ಮತ್ತು ಒಂದು ಸಾಹಿತ್ಯ ಸಂಸ್ಕೃತಿಯು ತನ್ನ ಸಾತತಿಕೆಯ ಮೂಲಕ ಕಟ್ಟಿಕೊಂಡಿರುವ ಮತ್ತು ಪ್ರಭುತ್ವ ಮಾನ್ಯವಾದಂತಹ ನಾಯಕ ವಿನ್ಯಾಸವನ್ನು ರೂಪಿಸಬೇಕಾಗುತ್ತದೆ ಮತ್ತು ಬಹುಮಟ್ಟಿಗೆ ಹಾಗಾಗಿದೆ. ಆದ್ದರಿಂದ ಅಂತ್ಯದಲ್ಲಿ ನಾಯಕಾಭ್ಯುದಯ ಅನಿವಾರ್ಯ. ಹಾಗಾಗಿ ಇದು ಭೀಮನ, ಸತ್ಯಾಶ್ರಯನ ಸಾಹಸದ ವಿಜಯ. ಈ ಚೌಕಟ್ಟನ್ನು ಸ್ಥೂಲವಾಗಿ ಒಪ್ಪಿಕೊಂಡರೂ ಕೂಡ ಕನ್ನಡ ಕವಿಗಳ ಸೃಜನ ಕರ್ಮ ಇದನ್ನು ತನ್ನ ಕಾಣ್ಕೆಗೆ ತಕ್ಕಂತೆ ಪಳಗಿಸಿಕೊಂಡಿದೆ.

ಹಾಗಾಗಿ ಇಲ್ಲಿನ ನಾಯಕ ವಿಶ್ವಾತ್ಮಕ ಸಂಸ್ಕೃತ ನಾಯಕರು ಹೊಂದಿರುವ ಧೀರೋದಾತ್ತತೆ, ಧೀರಲಲಿತತೆ, ಧೀರ ಪ್ರಶಾಂತತೆ ಅಥವಾ ಧೀರೋದ್ಧತೆಯ ಲಕ್ಷಣಗಳನ್ನು ಇಡಿಯಾಗಿ ಹೊಂದಿಲ್ಲ. ಬಹುಮಟ್ಟಿಗೆ ಧೀರೋದ್ಧತತನಕ್ಕೆ ಈ ನಾಯಕ ಲಕ್ಷಣಗಳು ಹತ್ತಿರವಿದ್ದರೂ ಕೂಡ ಅದೇ ಅಲ್ಲ. ಅಂದರೆ ಇಲ್ಲಿ ಪಠ್ಯವು ಮಾರ್ಗೀಯ ವಿನ್ಯಾಸಗಳಿಂದ ನಾಯಕ ಪಾತ್ರವನ್ನು ವಿನ್ಯಾಸಿಸುವುದಕ್ಕೆ ಬದಲಾಗಿ ಅಥವಾ ಅದೂ ಸೇರಿದಂತೆ ಸ್ಥಳೀಯ ಮೌಲ್ಯಗಳ ಮೂಲಕ ನಾಯಕ ಪಾತ್ರವನ್ನು ರೂಪಿಸಿದೆ. ಅಂದರೆ ನಾಯಕ ಪಾತ್ರವು ಪಠ್ಯ ಸಂದರ್ಭದ ಮೌಲ್ಯಗಳ ಅಥವಾ ಆದರ್ಶೀಕೃತಗೊಂಡ ಮೌಲ್ಯಗಳ ಜೀವದ್ರವ್ಯದಿಂದ ರೂಪುಗೊಂಡಿರುವಂಥವುಗಳಾಗಿವೆ. ಚಲ, ಚಾಗ, ಜಸ, ಇಱಿವ, ಕಾವ ಗುಣಗಳಿಂದ ಸಂಪನ್ನವಾದ ಪಾತ್ರವಾಗಿದ್ದಾನೆ ನಾಯಕ. ಈ ಹಿನ್ನೆಲೆಯಲ್ಲಿ ಆತ ಸಂಸ್ಕೃತ ನಾಯಕನಿಗೆ ಭಿನ್ನನಾಗುತ್ತಾನೆ.

ಈತ ಪ್ರತಿನಾಯಕನೊಂದಿಗೆ ಸಂಘರ್ಷಿಸುವಲ್ಲಿ ಕೊಡುವ ಕಾರಣಗಳು ಮೌಲ್ಯಗಳ ಹಿನ್ನೆಲೆಯಲ್ಲಿಯಾದರೂ ಕೂಡ ಪಠ್ಯದ ಧ್ವನಿ ಬೇರೆಯಾಗಿದೆ. ನಾಯಕ ಮುಖ್ಯವಾಗಿ ವಸ್ತು ಸಂಬಂಧದ ಕಾರಣಗಳನ್ನು ತನ್ನ ಮತ್ತು ಪ್ರತಿನಾಯಕ ಸಂಘರ್ಷಕ್ಕೆ ಕಾರಣವಾಗಿ ನೀಡುತ್ತಾನೆ. ಕೃಷ್ಣೆಯ ಕಚಪ್ರಾರಂಭವನ್ನು ನೀವೀಬಂಧವನ್ನು ಸೆಳೆಯುವುದು ಮುಖ್ಯ ಕಾರಣಗಳಾದರೂ, ಕೃತಕ ಜೂಜು, ವಿಷಾನ್ನವಿಕ್ಕಿದುದು ಇತ್ಯಾದಿ ಕಾರಣಗಳನ್ನು ಆತ ಉಲ್ಲೇಖಿಸುತ್ತಾನೆ ಅಂತಿಮವಾಗಿ ಪ್ರತಿನಾಯಕನ ಸಾವಿನೊಂದಿಗೆ ನಾಯಕಾಭ್ಯುದಯ ವುಂಟಾಗುತ್ತದೆ. ಇದು ಸಾಮಾನ್ಯ ಚಿತ್ರಣವೆ. ಆದರೆ ಈ ನಾಯಕ ತನ್ನ ಸಂಘರ್ಷಕ್ಕೆ ತನ್ನ ಕೆಲವು ಗುಣಗಳನ್ನು ಹಾಗೂ ತಾನು ನಂಬಿದ ಮೌಲ್ಯಗಳನ್ನು ಮುಂದುಮಾಡುತ್ತಾನೆ. ಅಲ್ಲಿ ಮಾತ್ರ ಆತ ಬೇರೆಯದೆ ಆದ ಕಥಾನಾಯಕನಾಗುತ್ತಾನೆ.

ಸಾಂಪ್ರದಾಯಿಕ ಅಥವಾ ವಿಶ್ವಾತ್ಮಕ ಸಂಸ್ಕೃತದ ಮಾದರಿಯಲ್ಲಿ ರೂಪುಗೊಂಡ ಪ್ರತಿನಾಯಕನಂತೆ ಇಲ್ಲಿ ಪ್ರತಿನಾಯಕನು ಮೋಸ, ಕಪಟದಲ್ಲಿ ಬಲ್ಲಿದನಲ್ಲ. ಆದರೆ ಅದೇ ಮಾದರಿಯ ವಿನ್ಯಾಸದಂತೆ ಈತ

**International Journal of Research in Social Sciences**
Volume 9, Issue 5 (May 2019)
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ರೂಪುಗೊಂಡಿದ್ದಾನೆ. ಕುಲೀನ, ಶೂರನಾದ ಈತ ಕೊನೆಗೆ ನಾಯಕನಿಂದ ವಧಿಸಲ್ಪಡುತ್ತಾನೆ. ಆ ನಿಟ್ಟಿನಲ್ಲಿ ಇದು ಸಂಸ್ಕೃತ ಚೌಕಟ್ಟಿಗೆ ತಾಳೆಯಾಗುತ್ತದೆ. ಆದರೆ ಹಾಗೆಂದು ಇದು ಅದರ ತದ್ವತ್ತಲ್ಲ. ಪಠ್ಯದ ರಾಜಕೀಯ ಪ್ರತಿನಾಯಕ ಪಾತ್ರ ಸಂಬಂಧದಲ್ಲಿ ಬೇರೆಯಾಗಿದೆ. ಆ ನೆಲೆಯಲ್ಲಿ ಪಠ್ಯ ಸಾಂಪ್ರದಾಯಿಕ ಅಥವಾ ಸಂಸ್ಕೃತ ಚೌಕಟ್ಟಿನ ಪ್ರತಿನಾಯಕ ವಿನ್ಯಾಸವಾಗಿಲ್ಲ. ಇಡೀ ಪಠ್ಯ ಚೌಕಟ್ಟಿನಲ್ಲಿ ಪ್ರತಿ ನಾಯಕ ಪಾತ್ರಕ್ಕೆ ಸಂಬಂಧಿಸಿದಂತೆ ಒಂದು ವಿಶೇಷವಾದ ಮಹತ್ವ ತಾನೇತಾನಾಗಿದೆ. ಈತ ಸಂಸ್ಕೃತ ಪ್ರತಿನಾಯಕನಂತೆ ದುಷ್ಟತನವನ್ನೆ ತನ್ನ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡವನಲ್ಲ. ಅದು ಪಠ್ಯ ಸಂದರ್ಭದಲ್ಲಿ ಭೂತದಲ್ಲಾದ ಅವಘಡ. ಆದರೆ ವರ್ತಮಾನದಲ್ಲಿ ಅವನ ನಿಲುವು ಬೇರೆಯಾಗಿದೆ. ತನ್ನ ಹಿಂದಿನ ಅಪಕಾರ್ಯಗಳ ಬಗ್ಗೆ ಪ್ರತಿಕ್ರಿಯಿಸದಿದ್ದರೂ, ಆತ ಇಂದು, ನಾಯಕನೊಂದಿಗಿನ ತನ್ನ ಸಂಘರ್ಷಕ್ಕೆ ಬೇರೆಯದೇ ಆದ ಕಾರಣಗಳನ್ನು ಮುಂದೊಡ್ಡುತ್ತಾನೆ. ಹಾಗಾಗಿ ಪಠ್ಯದಲ್ಲಿ ಸಂದರ್ಭವಶಾತ್ ಆತನ ದುರಾತ್ಮತೆ ಮತ್ತು ಖಳ (ಪೂರ್ವೋಕ್ತ , ಪು. 66) ತನದ ಬಗ್ಗೆ ಹೇಳಿದ್ದರೂ ಮಿಕ್ಕೆಡೆಯಲ್ಲಿ ಆತನ ಧೀರೋದಾತ್ತತೆಯ ಚಿತ್ರಣವೆ ಇದೆ. ಈ ವಿನ್ಯಾಸದಲ್ಲಿ ಆತ ನಾಯಕನಿಗೆ ಸರಿದೊರೆಯಾಗಿ ನಿಲ್ಲುತ್ತಾನೆ.

ನಾಯಕನ ತುಲನೆಯಲ್ಲಿ ಪ್ರತಿನಾಯಕ ತನ್ನ ಮತ್ತು ಆತನ ನಡುವಿನ ಸಂಘರ್ಷಕ್ಕೆ ವಸ್ತು ಸಂಬಂಧಿಯಾದ ಕಾರಣಗಳನ್ನು ಮುಂದೊಡ್ಡುವುದಿಲ್ಲ. ಈ ನೆಲೆಯಲ್ಲಿ ಆತ ನಾಯಕನಿಗೆ ಭಿನ್ನವಾಗಿ ಮೌಲ್ಯಸಂಬಂಧಿಯಾದ ಕಾರಣಗಳನ್ನು ಒಡ್ಡುತ್ತಾನೆ. ನಾಯಕನೊಂದಿಗೆ ಹೋಲಿಸಿದರೆ ಇಡೀ ಪಠ್ಯದ ಅವಕಾಶದಲ್ಲಿ ಪ್ರತಿನಾಯಕನಿಗೆ ಸ್ಥಳೀಯ ಮೌಲ್ಯ ಪರವಾಗಿ ಮಾತನಾಡುವ ಸಂದರ್ಭ ಹೆಚ್ಚಾಗಿದೆ. ಮೌಲ್ಯಗಳ ಕುರಿತು ಆದರಲ್ಲೂ ಇಳಿವ, ಅಭಿಮಾನದ ಚಲದ ಪರಿಭವದ ಕುರಿತು ಮತ್ತೆ ಮತ್ತೆ ಮಾತನಾಡುತ್ತಾನೆ. ಸೋಲು ಒದಗುವ ಸಂದರ್ಭ ಒದಗಿದರು ಕೂಡ ತನ್ನ ಈ ಮೌಲ್ಯಗಳನ್ನು ಉಳಿಸಿಕೊಳ್ಳುವ ಸಲುವಾಗಿಯೆ ಸಂಘರ್ಷಿಸುತ್ತಾನೆ. ಈ ಹಿನ್ನೆಲೆಯಲ್ಲಿ ಪ್ರತಿನಾಯಕ ಪಠ್ಯ ಸಂದರ್ಭದ ಸಾಮಾಜಿಕ ವಾಸ್ತವದ ಮೌಲ್ಯ ಸಂಹಿತೆಗಳನ್ನು, ನಿರೀಕ್ಷೆಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತಾನೆ. ನೆಲದ ಮೌಲ್ಯಗಳನ್ನು ಸರ್ವಾಂಗದಲ್ಲಿ ತುಂಬಿಕೊಂಡಿರುವಂಥ ಪಾತ್ರವಾದ ಕಾರಣ ಆತ ನಾಯಕನಿಗೂ ಮಿಗಿಲಾಗಿ ಗುರ್ತಿಸಲ್ಪಟ್ಟಿದ್ದಾನೆ. ಹಾಗಾಗಿ ಪ್ರತಿನಾಯಕನಾಗಿದ್ದಾಗ್ಯೂ ಆತನ ಅಸ್ತಿತ್ವವನ್ನು ಪಠ್ಯದಲ್ಲಿ ಗೌರವಯುತವಾಗಿ ಗುರ್ತಿಸಲಾಗಿದೆ. ಪಠ್ಯ ಸಂದರ್ಭದಲ್ಲಿ ಆತನನ್ನು ಪಿರಿಯರ್ (ಪೂರ್ವೋಕ್ತ, ಪು. 48) ಎಂದು ಗುರ್ತಿಸಲಾಗಿದೆ. ಅಲ್ಲದೆ ಆತನನ್ನು ಮಹಾಸತ್ವ (ಪೂರ್ವೋಕ್ತ ,ಪು. 46) ಎಂದೂ ಗುರ್ತಿಸಿದೆ. ಮಹಾಸತ್ವ ಲಕ್ಷಣ ಸಂಸ್ಕೃತ ವಾಙ್ಮಯ ಚೌಕಟ್ಟಿನಲ್ಲಿ ಧೀರೋದಾತ್ತ ನಾಯಕನಿಗೆ ದತ್ತವಾದ

**International Journal of Research in Social Sciences**
Volume 9, Issue 5 (May 2019)
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ವಿಶೇಷ ಲಕ್ಷಣ. ಉಳಿದ ನಾಯಕರಾರಿಗೂ ಈ ಗುಣ ವಿಶೇಷವಿಲ್ಲ. ಕನ್ನಡದಲ್ಲಿ ಅದನ್ನು ಪ್ರತಿನಾಯಕನಿಗೆ ಉಪಯೋಗಿಸಿದೆ. ಅದರಲ್ಲೂ ಸ್ಥಳೀಯ ಅರಸನನ್ನು ತಾದಾತ್ಮೀಕರಿಸಿ ಹೇಳಿರುವ ನಾಯಕನೊಬ್ಬನ ಎದುರಿನ ಪ್ರತಿನಾಯಕನಿಗೆ ಇದನ್ನು ಬಳಸಿದೆ ಎಂಬಲ್ಲಿ ಇದನ್ನು ಗಮನಿಸಿದರೆ ಪಠ್ಯ ಸಂದರ್ಭವು ಪ್ರತಿನಾಯಕನಿಗಿತ್ತಿರುವ ವಿಶೇಷ ಮಾನ್ಯತೆಯನ್ನು ಗಮನಿಸಬೇಕು. ಇಷ್ಟೇ ಅಲ್ಲದೆ ಗದಾಯುದ್ಧ ಸಂದರ್ಭದಲ್ಲಿ ಕೂಡ ಉಭಯತ್ರರನ್ನು ವರ್ಣಿಸುವಾಗ ಪಠ್ಯದಲ್ಲಿ ಮತ್ತೆ ಮತ್ತೆ ಅವರನ್ನು ಸಮಬಲರೆಂದೇ (ಪೂರ್ವೋಕ್ತ , ಪು. 92) ಗುರ್ತಿಸುವ ಪ್ರಯತ್ನವಿದೆ. ಒಟ್ಟಾರೆ ಇದಕ್ಕೆ ಕಾರಣವೆಂದರೆ ಪಠ್ಯ ಸಂದರ್ಭದ ಸಾಮಾಜಿಕ ಪರ್ಯಾವರಣದ ವೀರ ಮೌಲ್ಯವನ್ನು ಆವಾಹಿಸಿಕೊಂಡಿರುವುದು ಪ್ರತಿನಾಯಕ ಪಾತ್ರವೆ ಕ್ಷತ್ರಿಯ ತೇಜದ ಬಗ್ಗೆ ಪಠ್ಯ ಸಂದರ್ಭದಲ್ಲಿ ಪ್ರಸ್ತಾಪವಿದೆ. ವಾಸ್ತವದಲ್ಲಿ ಅದನ್ನು ಹೊಂದಿರುವವನು ಪ್ರತಿನಾಯಕ. ಆಗಿನ ವೀರತನದ ಮೌಲ್ಯಸಂಹಿತೆಯಲ್ಲಿ ಒಳಗೊಳ್ಳುವ ಉದ್ಧಟತನ, ಅಹಂಕಾರ ಗುಣಗಳನ್ನು ತೀವ್ರವಾಗಿ ಪರಿಭಾವಿಸುವವನು ಆತನೆ.

ಇಷ್ಟಾಗಿಯೂ ಕೂಡ ಪಠ್ಯದಾಚೆಗಿನ ರಾಜಕೀಯ ಮತ್ತು ಅದು ವಿಧಿಸಿದ ಸಾಹಿತ್ಯ ಸಂಸ್ಕೃತಿಯ ವಿನ್ಯಾಸ ಬೇರೆಯದೇ ಆಗಿರುವುದರಿಂದ ಪಠ್ಯ ಅದಕ್ಕನುಗುಣವಾಗಿ ಸಾತತಿಕೆಗೆ ಬದ್ಧವಾಗಿದೆ. ಅಂತ್ಯದ ನಾಯಕಾಭ್ಯುದಯ ಅಥವಾ ಭೀಮನ ಸಾಹಸದ ವಿಜಯವೇ ಗಮ್ಯವಾದದ್ದರಿಂದ ಪಠ್ಯ ಅದಕ್ಕನುಗುಣವಾಗಿದೆ. ಇದು ರಾಜಕೀಯವಾಗಿಯೂ ಅಪೇಕ್ಷಿತವಾದದ್ದು. ಏಕೆಂದರೆ ಇದು ಭೀಮನ ಸಾಹಸದ ವಿಜಯವೂ, ಸತ್ಯಾಶ್ರಯನ ಸಾಹಸದ ವಿಜಯವೂ ಆಗುವುದಾದ್ದರಿಂದ ಇದು ನಿರೀಕ್ಷಿತ. ಪಠ್ಯ ಸಂದರ್ಭದ ಸಾಹಿತ್ಯ ಸಂಸ್ಕೃತಿಯಲ್ಲಿ ಇದು ಆಗಬೇಕಾದದ್ದು. ಹಾಗೆ ನೋಡುವುದಾದರೆ ಪಂಪನಿಂದ ಮೊದಲುಗೊಂಡು ನಾಗಚಂದ್ರನವರೆಗೆ ಈ ಮಾತೃಕೆ ರೂಢಮೂಲವಾಗಿದೆ.

ಆದರೆ ಇಷ್ಟಾಗಿಯೂ ಕೂಡ ಕನ್ನಡ ಸಾಹಿತ್ಯ ಸಂಸ್ಕೃತಿ ಈ ರಾಜಕೀಯ ನಿಯಂತ್ರಕತೆಯನ್ನು ಒಂದು ಹಂತದವರೆಗೆ ಪರಿಪಾಲಿಸಿಕೊಂಡು ಬಂದಿದ್ದರೂ ಕೂಡ ಆಂತರ್ಯದಲ್ಲಿ ಅದರೊಂದಿಗೆ ತನ್ನ ವಿದ್ರೋಹಾತ್ಮಕ ಸಂಬಂಧವನ್ನು ಸಾಧಿಸಿಕೊಂಡೇ ಬಂದಿದೆ. ತನ್ಮೂಲಕ ತನ್ನ ಸೃಜನ ಸ್ವಾತಂತ್ರ್ಯವನ್ನು ಉಳಿಸಿಕೊಂಡೇ ಬಂದಿದೆ. ಪಂಪನಲ್ಲಿ ಅರ್ಜುನ, ರನ್ನನಲ್ಲಿ ಭೀಮ, ನಾಗಚಂದ್ರನಲ್ಲಿ ರಾಮ ಅಂತಿಮವಾಗಿ ವಿಜಯಿಯಾಗುವವರಾದರೂ ಕೂಡ, ಪಠ್ಯದ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಾಚೆಯೂ ಕೂಡ ಪ್ರತಿನಾಯಕರಾದ ಕರ್ಣ, ದುರ್ಯೋಧನ, ರಾವಣರು ಮುಖ್ಯರಾಗುತ್ತಾರೆ. ತೀವ್ರವಾದ ಸ್ಥಳೀಯ ತಲ್ಲಣಗಳಿಗೆ, ಪರ್ಯಾವರಣದ ಮೌಲ್ಯಗಳಿಗೆ ಮನುಷ್ಯನನ್ನು ಕಾಡಿದ ಮುಖ್ಯ ಪ್ರಶ್ನೆಗಳಿಗೆ ಈ ಪ್ರತಿನಾಯಕರು ಒಡ್ಡಿಕೊಳ್ಳುತ್ತಾರೆ, ಪರಿಶೋಧಿಸುತ್ತಾರೆ, ಅರ್ಥೈಸಿಕೊಳ್ಳುತ್ತಾರೆ.

ಕರ್ಣನಲ್ಲಿ ಕುಲಕ್ಕೆ ಸಂಬಂಧಿಸಿದಂತೆ ತೀವ್ರವಾದ ಚರ್ಚೆಗಳೆದ್ದಿದೆ. ಆತ ಕುಲಮೆಂಬುದುಂಟೆ ಎಂದು ಪ್ರಶ್ನಿಸುತ್ತಾನೆ. ಆ ಕುಲಕ್ಕೆ ಬದಲಾಗಿ ಬೀರ, ಆಯ, ಅಳವು, ಅಣ್ಮುವನ್ನು ಕುಲವೆನ್ನುತ್ತಾನೆ. ತನ್ನ ಕಾಲದ ತೀವ್ರ ಸಮಸ್ಯೆಗಳಿಗೆ ಆತ ಒಡ್ಡಿಕೊಳ್ಳುತ್ತಾನೆ. ನಾಯಕ ಮತ್ತು ಪ್ರತಿನಾಯಕರು ಕುಲೀನ ರಾಗಿರಬೇಕೆಂದು ವಿಧಿಸುವ ಸಂಸ್ಕೃತ ಮೀಮಾಂಸೆಯ ಹಿನ್ನೆಲೆಯಲ್ಲಿ ಇದು ಮುಖ್ಯವಾಗಿದೆ. ಮತಾಂತರಿತ ಹಿನ್ನೆಲೆಯ ಪಂಪನಿಗೆ ತನ್ನ ಕಾಲದ ಈ ಸಮಸ್ಯೆ ತೀವ್ರವಾದದ್ದೆನಿಸಿದೆ. ಕರ್ಣ ಅದರ ಅಭಿವ್ಯಕ್ತಿ. ರನ್ನನ ದುರ್ಯೋಧನ ಸಂದರ್ಭದ ಚರ್ಚೆ ಹಿಂದೆಯೆ ನಡೆಸಿದೆ. ತೀವ್ರವಾದ ಶೌರ್ಯದ ತುರೀಯತೆಯನ್ನು ಈ ಪಾತ್ರ ವ್ಯಕ್ತಪಡಿಸುತ್ತದೆ. ತನ್ನ ಕಾಲದ ಈ ವೀರತೆಯ ಅದಮ್ಯ ಆಕಾಂಕ್ಷೆಯನ್ನು, ಒತ್ತಾಯವನ್ನು ಈ ಪಾತ್ರ ತೋರುತ್ತದೆ. ನಾಗಚಂದ್ರನ ರಾವಣ ವಿಶಿಷ್ಟವಾದವನು. ಬ್ರಹ್ಮಚರ್ಯ, ಶೌಚ ಮೌಲ್ಯವೆಂದು ನಂಬಿದ ಜೈನ ಸಮಾಜ ಸಂದರ್ಭದಲ್ಲಿ ರೂಪುಗೊಂಡ ಜೈನ ರಾಮಾಯಣ ರಾಮಚಂದ್ರ ಚರಿತ ಪುರಾಣದ ಪಾತ್ರವೀತ. ಅಂದರೆ ಒಂದು ಜಡ ಧಾರ್ಮಿಕ ವ್ಯವಸ್ಥೆ ವಿಧಿಸುವ ಚೌಕಟ್ಟಿನಾಚೆಗೆ ಅನೇಕ ಸಂಕೀರ್ಣತೆ ಮತ್ತು ಸ್ತರಗಳನ್ನೊಳಗೊಂಡ ಮಾನವನ ಮನಸ್ಸಿನ ಪ್ರಕ್ರಮ ಬೇರೆಯದೇ ಆದುದನ್ನೂ, ಭಿನ್ನವಾಗಿ ವರ್ತಿಸುವುದನ್ನು ಈ ಪಾತ್ರ ಶ್ರುತಪಡಿಸುತ್ತದೆ. ಪರಾಂಗನಾವಿರತಿ ವ್ರತದ ಹಿನ್ನೆಲೆಯಲ್ಲಿ ಪ್ರತಿನಾಯಕ ಪಾತ್ರ ವ್ಯಕ್ತಿಯ ಆಂತರ್ಯವನ್ನು ತೀವ್ರವಾಗಿ ಶೋಧಿಸುತ್ತದೆ. ಮನಸ್ಸಿನ ತಲ್ಲಣಗಳನ್ನು ಕಂಡ ಕವಿಗೆ ಈ ಧಾರ್ಮಿಕತೆಯ ಕಟ್ಟಳೆಗಳು ಒಂದೆಡೆ ನಿರರ್ಥಕವೆನಿಸಿದೆ. ನಾಯಕ ಪ್ರತಿನಾಯಕರ ಶೌಚ ಕ್ಕೆ ಪ್ರಾಮುಖ್ಯತೆಯಿತ್ತಿರುವ ಸಂಸ್ಕೃತ ವಿಶ್ವಾತ್ಮಕತೆಗೆ ಇದು ಭಿನ್ನವಾದದ್ದು. ಒಟ್ಟಾರೆ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲೆ ವಿಶ್ವಾತ್ಮಕ ಸಂಸ್ಕೃತ ಸಾಹಿತ್ಯಕ ವಿನ್ಯಾಸದಂತಲ್ಲದೆ ಬೇರೆಯದಾದ, ವಿಶಿಷ್ಟವಾದ ಮತ್ತು ಸ್ಥಳೀಯವಾದಂತಹ ಪ್ರತಿನಾಯಕ ಪರಂಪರೆಯನ್ನು ಸೃಜಿಸಿದೆ. ಇವರು ನೆಲದ ತಲ್ಲಣಗಳಿಗೆ, ಸಮಸ್ಯೆಗಳಿಗೆ ಪ್ರತಿಸ್ಪಂದಿಸಿದವರು. ಹಾಗಾಗಿ ಇವರು ಸ್ಥೂಲವಾಗಿ ವಿಶ್ವಾತ್ಮಕ ಸಂಸ್ಕೃತ ಚೌಕಟ್ಟನ್ನು ತೋರ್ಪಡಿಸಿಕೊಂಡರೂ ಅಂತರಂಗದಲ್ಲಿ ಸ್ಥಳೀಯವಾದ ಮಣ್ಣಿನ ವಾಸನೆ ಸೂಸುವವರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ರನ್ನನ ದುರ್ಯೋಧನನ ಪಾತ್ರ ಮತ್ತೂ ವಿಶಿಷ್ಟವಾದುದು. ಕನ್ನಡ ಸಾಹಿತ್ಯ ಸಾತತಿಕೆಯಲ್ಲಿ ಪ್ರತಿನಾಯಕನಿಗೆ ವಿಶಿಷ್ಟ ದನಿಯಿದ್ದರೂ, ಆತನಿಗೆ ಕಾವ್ಯದಲ್ಲಿ ಮುಖ್ಯ ನೆಲೆ ದೊರೆತದ್ದು ಸಾಹಸ ಭೀಮ ವಿಜಯದಲ್ಲೆ. ನಾಯಕನಿಗೆ ಮಿಗಿಲೆನಿಸುವಂಥ ಅವಕಾಶಗಳು, ವ್ಯಾಪ್ತಿ, ಭಿತ್ತಿ ದೊರೆತಿರುವುದು ಸಾಹಸ ಭೀಮ ವಿಜಯದಲ್ಲಿ. ಇದಕ್ಕೆ ಕಾರಣವೂ ಕೂಡ ಇದೆ. ಇತರರಂತಲ್ಲದೆ ರನ್ನ ಶಕ್ತಿಯನ್ನು ತನ್ನ ಮುಖ್ಯ ಮೌಲ್ಯವನ್ನಾಗಿ, ನೆಲೆಯನ್ನಾಗಿ ಮಾಡಿಕೊಂಡಿರುವವನು. ವೀರ, ಶೌರ್ಯ, ಅಭಿಮಾನ, ಛಲ ಮೊದಲಾದ

International Journal of Research in Social Sciences
Volume 9, Issue 5 (May 2019)
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಮೌಲ್ಯಗಳಿಗೆ ಮಿಗಿಲಾಗಿ ತನ್ನನ್ನು ತೆರೆದುಕೊಂಡವನು. ಈ ಗುಣಮೌಲ್ಯಗಳ ಅಭಿವ್ಯಕ್ತಿಗೆ ಶ್ರೇಷ್ಠ ಭಿತ್ತಿಯಾಗುವ ಸಂದರ್ಭ ವಸ್ತುನೆಲೆಯಲ್ಲಿದ್ದದ್ದು ಪ್ರತಿನಾಯಕ ದುರ್ಯೋಧನನಿಗೆ. ಸದ್ಯವಾಸ್ತವದ ನೆಲದ ಮೌಲ್ಯಗಳಾದ, ಇವುಗಳ ಮೂರ್ತರೂಪವಾದ ಪ್ರತಿನಾಯಕ ಪಾತ್ರ ಪಠ್ಯ ಸಂದರ್ಭದಲ್ಲಿ ಮುನ್ನೆಲೆಗೆ ಬರುವುದು ಈ ಹಿನ್ನೆಲೆಯಲ್ಲಿ ಸಹಜವಾದದ್ದೆ. ಆದ್ದರಿಂದ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಬಹುಮುಖ್ಯ ಮತ್ತು ವಿಶಿಷ್ಟ ಪ್ರತಿನಾಯಕನಾಗಿ ಆತ ರೂಪುಗೊಂಡಿದ್ದಾನೆ.

ಪ್ರತಿನಾಯಕ ದುರ್ಯೋಧನನನ್ನು ದುರಂತ ನಾಯಕ ಎಂದು ಬಿಂಬಿಸುವ ಪ್ರಯತ್ನಗಳು ನಡೆದಿವೆ. ಮುಖ್ಯವಾಗಿ ಬಿ.ಎಂ.ಶ್ರೀಕಂಠಯ್ಯನವರು ಈ ಪಂಥದ ವಕ್ತಾರರು. ಆದರೆ ದುರಂತ ನಾಯಕ ಪಾತ್ರ ಪೋಷಣೆಗೆ ಅವಶ್ಯಕವಾದ, ಅದರನುಸಾರಿಯಾದಂತಹ ವಿನ್ಯಾಸ ದುರ್ಯೋಧನನಲ್ಲಿ ಕಂಡುಬರುವುದಿಲ್ಲ. ಅದೂ ಅಲ್ಲದೆ ಅನ್ಯ ಸಮಾಜದ ಸಾಂಸ್ಕೃತಿಕ ಪರಿವೇಷದಲ್ಲಿ ರೂಪುಗೊಂಡ ಒಂದು ಪಾತ್ರ ಮಾದರಿಯನ್ನು ತಂದು ಅದನ್ನು ಇಲ್ಲಿನ ಭಿನ್ನ ಸಮಾಜ ಮತ್ತು ತನ್ನದೇ ಆದ ಸಾಹಿತ್ಯ ಸಂಸ್ಕೃತಿಯನ್ನು ರೂಢಿಸಿಕೊಂಡಿರುವ ಒಂದು ವ್ಯವಸ್ಥೆಗೆ ಮತ್ತು ಇಲ್ಲಿನ ಪರಿಕಲ್ಪನೆಗೆ ತಗುಳ್ಚುವ ಪ್ರಯತ್ನ ಎಷ್ಟು ಸಾಧುವಾದದ್ದು ಮತ್ತು ಎಷ್ಟು ಸರಿಯಾದದ್ದು ಎಂಬುದು ಪ್ರಶ್ನೆ. ಹಾಗಾಗಿ ದ.ರಾ. ಬೇಂದ್ರೆಯವರು ಇದಕ್ಕೆ ಪ್ರತಿಯಾಗಿ ಎತ್ತುವ ಆಕ್ಷೇಪಣೆ ಸರಿಯಾದದ್ದೆ ಆಗಿದೆ. ಅಲ್ಲದೆ ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಕುರಿತ ಈ ಬಗೆಯ ತೀರ್ಮಾನ ಯಾವ ಸಂದರ್ಭದಲ್ಲಿ ಬಂದಿತೆನ್ನುವುದು ಕೂಡ ಮುಖ್ಯವಾದದ್ದು. ಸಾಮಾಜಿಕ ಸಂದರ್ಭವು ಹೇಗೆ ಸಾಹಿತ್ಯ ಸಂಸ್ಕೃತಿಯನ್ನು ನಿರ್ಧರಿಸುತ್ತದೆ. ಆದರ ತೀರ್ಮಾನಗಳನ್ನು, ನಿಲುವುಗಳನ್ನು ರೂಪಿಸುತ್ತದೆ ಎಂಬುದು ಇದರಿಂದ ತಿಳಿಯುತ್ತದೆ.

ಕನ್ನಡ ಕವಿಗಳು ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ರೂಪಿಸುವಲ್ಲಿ ತಮ್ಮದೇ ಆದ ರಾಜಕೀಯ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ಸೃಜನಶೀಲವಾದ ಪರಿವರ್ತನೆಯನ್ನು ಮೆರೆದಿದ್ದಾರೆ. ಹಿಂದೆಯೇ ಗಮನಿಸಿರುವಂತೆ ವಿಶ್ವಾತ್ಮಕ ಸಂಸ್ಕೃತದ ವಿನ್ಯಾಸಕ್ಕೆ ಹೊರತಾದ ನಾಯಕ, ಪ್ರತಿನಾಯಕರ ವಿನ್ಯಾಸಗಳು ಕನ್ನಡ ಸಂದರ್ಭದಲ್ಲಿ ರೂಪುಗೊಂಡಿವೆ. ಅಂದರೆ ವಿಶ್ವಾತ್ಮಕತೆಗೆ ಬದಲಾಗಿ ಅಥವಾ ಅದನ್ನು ಆನುಷಂಗಿಕವಾಗಿ ಒಳಗೊಂಡು ಮುಖ್ಯವಾಗಿ ಪ್ರಾದೇಶಿಕ ನೆಲೆಯ ಮೌಲ್ಯಗಳ ರಚನೆಗಳೇನಿದ್ದವು ಮುಖ್ಯವಾಗಿ ಅವುಗಳ ಹಂದರದಲ್ಲಿ, ಸ್ಥಳೀಯವಾದ ನಾಯಕ ಪ್ರತಿನಾಯಕರುಗಳನ್ನು ರೂಪಿಸುವಲ್ಲಿ ಕನ್ನಡ ಕವಿಗಳು ಶ್ರಮಪಟ್ಟರು. ಆ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಕನ್ನಡದ್ದೇ ಆದ ನಾಯಕ ಮತ್ತು ಪ್ರತಿನಾಯಕ ವಿನ್ಯಾಸವನ್ನು ಅವರು ರೂಪಿಸಿದರು. ಕನ್ನಡದ ಕವಿಗಳು ವಿಶ್ವಾತ್ಮಕ ಸಂಸ್ಕೃತದ ಮಾರ್ಗೀಯ ನಾಯಕ, ಮತ್ತು ಮಾರ್ಗೀಯ ಪ್ರತಿನಾಯಕರಿಗೆ ಬದಲಾಗಿ ಮತ್ತು ಪ್ರತಿಯಾಗಿ

International Journal of Research in Social Sciences
Volume 9, Issue 5 (May 2019)
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com
Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

**ದೇಶೀಯ ನಾಯಕ ಮತ್ತು ದೇಶೀಯ ಪ್ರತಿನಾಯಕರನ್ನು ರೂಪಿಸುವಲ್ಲಿ ಆಸ್ಥೆ ವಹಿಸಿದರು. ಇದರಿಂದಾಗಿ ಸಂಸ್ಕೃತದ ಎದುರಿನಲ್ಲಿ ಕನ್ನಡಕ್ಕೆ ಬೇರೆಯದೇ ಆದ ನೆಲೆಯನ್ನು ಒದಗಿಸಿಕೊಟ್ಟರು. ಆ ಮೂಲಕ ವಿಶಿಷ್ಟವಾದ ಮತ್ತು ಅನನ್ಯವಾದ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಈ ಕವಿಗಳು ಕಟ್ಟಿದರು.**

**ಪ್ರಭುತ್ವ ಅದು, ರಾಜಕೀಯ, ಧರ್ಮ, ಜಾತಿ, ಭಾಷೆ, ಪ್ರದೇಶ, ಬಣ್ಣ, ಅಂತಸ್ತು, ಬಹುಸಂಖ್ಯಾತರ ಅಭಿಪ್ರಾಯ ಯಾವುದೇ ರೂಪದಲ್ಲಾಗಿ ಇರಲಿ, ಕವಿ, ಬರೆಹಗಾರ ಮತ್ತು ಆತನ ಸಾಹಿತ್ಯ, ಬರೆಹ ಈ ಪ್ರಭುತ್ವ ಪ್ರಣೀತ ಸಾಮಾನ್ಯ ಗ್ರಹಿಕೆಗಳನ್ನು ಎದುರುಗೊಳ್ಳಲೇಬೇಕಾಗುತ್ತದೆ. ಸಮಾಜ, ಸಂಸ್ಕೃತಿ, ಪ್ರಭುತ್ವದ ವಿವಿಧ ಅಂಗಗಳು ಇವುಗಳ ಮೂಲಕ ರೂಪುಗೊಳ್ಳುವ ಪರಿಸರ, ತನ್ಮೂಲಕ ರೂಪುಗೊಳ್ಳುವ ಸಾಮೂಹಿಕ ಪ್ರಜ್ಞೆ, ಹಾಗು ಅದರ ಭಾಗವಾಗಿರುವ ಕವಿಯ ವ್ಯಕ್ತಿಪ್ರಜ್ಞೆ ಇವುಗಳ ಮಧ್ಯೆ ವಿಶಿಷ್ಟ ಸಂಬಂಧ ರೂಪುಗೊಂಡಿರುತ್ತದೆ. ಅದು ಸಂಘರ್ಷ, ಅನುಸಂಧಾನ, ಅನುನಯ ಇತ್ಯಾದಿ ರೂಪದಲ್ಲಿರಬಹುದು. ಪ್ರಸ್ತುತ ರನ್ನ, ಆತನ ಸಾಹಸಭೀಮ ವಿಜಯ ಕೃತಿ ನಿರಂಕುಶ ರಾಜಪ್ರಭುತ್ವದ ಸಂದರ್ಭದಲ್ಲಿ, ನಾಯಕ-ಪ್ರತಿನಾಯಕರ ಮರುರೂಪಣೆಯ ಮೂಲಕ, ಪ್ರಭುತ್ವಾಶ್ರಿತ ಸಾಹಿತ್ಯ ಸಂಸ್ಕೃತಿಯ ಪರಿಪ್ರೇಕ್ಷ್ಯದಲ್ಲಿ ನಿರ್ಮಾಣಗೊಂಡ ಕೃತಿಯ ಪರಿಮಿತಿಯಲ್ಲಿ, ಕವಿರನ್ನ ತನ್ನ ವ್ಯಕ್ತಿವಿಶಿಷ್ಟ ಪ್ರಜ್ಞೆಯ ಮೂಲಕ, ನೆಲಮೂಲದ ಸ್ಥಳೀಯಮೌಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನ ಮಾಡುತಾನೆ. ಸ್ಥಾಪಿತ ನಿಲುವುಗಳನ್ನು ಪ್ರಶ್ನಿಸುವ ಪ್ರಯತ್ನವನ್ನು ನಿರಂಕುಶ ರಾಜಸತ್ತೆಯ ಸಂದರ್ಭದಲ್ಲಿ ಆಶ್ರಿತ ಅರಸನ ಎದುರಿನಲ್ಲಿ ಮಾಡುವ ಸ್ವಾತಂತ್ರ್ಯವನ್ನು ಆತ ತೋರುತ್ತಾನೆ. ಆದಾಗಿಯೂ ಆತ ರಾಜಪ್ರಭುತ್ವ ಸಂಸ್ಕೃತಿಯಲ್ಲಿ ಆತ ಕವಿಚಕ್ರವರ್ತಿಯಾಗಿ ಉಳಿಯುತ್ತಾನೆ. ಈ ಹಿನ್ನೆಲೆಯಲ್ಲಿ ಪ್ರಭುತ್ವ ಹಾಗು ಬರೆಹಗಾರರ ನಡುವಿನ ಸಂಬಂಧ ಪ್ರಸ್ತುತ ಯಾವ ನೆಲೆಗೆ ತಲುಪಿದೆ ಎಂಬುದನ್ನು ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇರುವ ವಿದ್ವದ್ವಲಯ ತೌಲನವಾಗಿ ಹಾಗು ಗಂಭೀರವಾಗಿ ಆಲೋಚಿಸಲು ರನ್ನನ ತಿಳಿವಳಿಕೆಯ ಬೆಳಕಿನಲ್ಲಿ ಮುಂದಡಿಯಿಡಬೇಕಿದೆ.**

## ಆಕರಗ್ರಂಥಗಳು:

1. ಕುಲಕರ್ಣಿ. ಆರ್.ವಿ. (ಸಂ)***ಕವಿಚಕ್ರವರ್ತಿ ಕವಿರನ್ನ ವಿರಚಿತ ಸಾಹಸ ಭೀಮ ವಿಜಯಂ***, (ಗದಾಯುದ್ಧಂ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998
2. ಅಶೋಕ. ಟಿ.ಪಿ. (ಸಂ) ***ಆರೆ ಶತಮಾನದ ಆಲೆ ಬರಹಗಳು***, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 2004
3. ಅನಂತರಂಗಾಚಾರ್. ಎಸ್. (ಸಂ) ***ಪಂಪಕವಿ ವಿರಚಿತ ಪಂಪಭಾರತಂ***, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002

4. ಕಲಬುರ್ಗಿ. ಎಂ.ಎಂ. ***ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ,*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
5. ನರಸಿಂಹಾಚಾರ್. ಡಿ.ಎಲ್. ***ಪಂಪರಾಮಾಯಣ ಸಂಗ್ರಹ***, ಮೈಸೂರು ವಿ.ವಿ., ಮೈಸೂರು, **1972**
6. ನಾಗಭೂಷಣ ಸ್ವಾಮಿ. ಓ.ಎಲ್. ***ವಿಮರ್ಶೆಯ ಪರಿಭಾಷೆ***, ಅಂಕಿತ ಪುಸ್ತಕ, ಬೆಂಗಳೂರು, **1998**
7. ಮಲ್ಲೇಪುರಂ ಜಿ. ವೆಂಕಟೇಶ(ಸಂ) ***ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ***, ಕನ್ನಡ ವಿಶ್ವವಿದ್ಯಾಲಯ, ಹಂಪಿ, **2000**
8. ವೆಂಕಟಾಚಲಶಾಸ್ತ್ರಿ . ಟಿ.ವಿ. ***ಮಹಾಕಾವ್ಯ ಲಕ್ಷಣ,*** ಡಿ.ವಿ.ಕೆ. ಮೂರ್ತಿ, ಮೈಸೂರು, **2001**
9. ವೆಂಕಟಾಚಲಶಾಸ್ತ್ರೀ. ಟಿ.ವಿ. ***ಶ್ರೀವತ್ಸ ನಿಘಂಟು***, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, **1999**